‘ನಿಮಗೆ ಸರಿ ಹೊಂದುವ ಪೋಷಾಕು ಸಿಗಲಿಲ್ಲ. ಹಾಗಾಗಿ, ಈ ಬಾಹ್ಯಾಕಾಶ ಯಾತ್ರೆಯಿಂದ ನೀವು ಹೊರಗುಳಿಯುತ್ತಿದ್ದೀರಿ’.

ಅಂತರಿಕ್ಷ ನಿಲ್ದಾಣಕ್ಕೆ ಹೋಗಿ ವಿಶೇಷ ಅಧ್ಯಯನ ಮಾಡಲು ಎಲ್ಲಾ ತಯಾರಿ ಮಾಡಿಕೊಂಡಿದ್ದ ಮಹಿಳಾ ಗಗನಯಾತ್ರಿ ಅನ್ನೆ ಮ್ಯಾಕ್ಲೆನ್, ‘ನಾಸಾ’ ನೀಡಿದ ಹೇಳಿಕೆಯಿಂದ ಕಂಗಾಲಾಗಿ ಹೋಗಿದ್ದರು. ಸಹ ಮಹಿಳಾ ಗಗನಯಾತ್ರಿ ಕ್ರಿಸ್ಟಿನಾ ಕೋಚ್, ‘ಕೊನೆಯ ಹಂತದಲ್ಲಿ ಹೀಗೇಕಾಯಿತು?’ ಎಂದು ತಬ್ಬಿಬ್ಬಾದರು. ಬಾಹ್ಯಾಕಾಶ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಮಹಿಳೆಯರೆಲ್ಲ ‘ಇದು ಉದ್ದೇಶಪೂರ್ವಕ’ ಎಂದರು. ಮಹಿಳೆಯರ ಕುರಿತು ತಾರತಮ್ಯ ಧೋರಣೆ ಅನುಸರಿಸಲಾಗಿದೆ ಎಂದು ಪ್ರತಿಭಟನೆಗಳೂ ನಡೆದವು. ಟ್ವಿಟರ್‌ನಲ್ಲಿ ‘ನಾಸಾ’ದ ಪುರುಷ ಸ್ವಾಮ್ಯದ ಕುರಿತು ವ್ಯತಿರಿಕ್ತ ಹೇಳಿಗಳು ಪ್ರಕಟವಾದವು. ಇದು ನಡೆದದ್ದು 2000ನೇ ಇಸವಿಯಲ್ಲಿ.

ಪೋಷಾಕು ದೊರೆಯದಿರುವ ಕ್ಷುಲ್ಲಕ ಕಾರಣ ನೀಡಿ ಮಹಿಳಾ ಗಗನಯಾನಿಗೆ ಅವಕಾಶ ನಿರಾಕರಿಸಿದ ‘ನಾಸಾ’ದ ನಿರ್ಧಾರ, ಮಹಿಳಾ ವಿಜ್ಞಾನ ಸಂಶೋಧಕರ ವ್ಯಾಪಕ ಟೀಕೆ–ಆಕ್ರೋಶಗಳಿಗೆ ಗುರಿಯಾಗಿತ್ತು. ತನ್ನ ಮಹತ್ವಾಕಾಂಕ್ಷೆ ಬಾಹ್ಯಾಕಾಶ ಯೋಜನೆಯಾದ ‘ಐಎಸ್‌ಎಸ್’ (ಇಂಟರ್ ನ್ಯಾಷನಲ್ ಸ್ಪೇಸ್ ಸ್ಟೇಷನ್) ಎಕ್ಸ್‌ಪೆಡಿಶನ್ 59, 60, 61ನಲ್ಲಿ ಕ್ರಿಸ್ಟಿನಾ ಕೋಚ್ ಮತ್ತು ಅನ್ನೆ ಮ್ಯಾಕ್ಲೆನ್ ಎಂಬ ಇಬ್ಬರು ಮಹಿಳಾ ಗಗನಯಾತ್ರಿಯರನ್ನು ಕಳಿಸುವುದು ಎಂದು ಮೊದಲೇ ತೀರ್ಮಾನವಾಗಿತ್ತು.

ಐದು ವರ್ಷಗಳ ಸುದೀರ್ಘ ತರಬೇತಿಯನ್ನು ಇಬ್ಬರಿಗೂ ನೀಡಲಾಗಿತ್ತು. ಅಪರೂಪದ ಅವಕಾಶ ಪಡೆದುಕೊಂಡಿದ್ದ ಗಗನಯಾತ್ರಿಗಳು ಭಾರೀ ಉಮೇದಿನಲ್ಲಿದ್ದರು. ಆದರೆ ಅಂತಿಮ ಹಂತದಲ್ಲಿ ಕೇವಲ ಒಬ್ಬ ಮಹಿಳಾ ಗಗನಯಾತ್ರಿಗೆ ಅವಕಾಶ ನೀಡಲಾಯಿತು. ಅದಕ್ಕೆ ಕೊಟ್ಟ ಕಾರಣ ತಮಾಷೆಯದಾಗಿತ್ತು. ‘ನಾಸಾ’ದ ನಿರ್ಧಾರದ ಮೂಲಕ ವೈಜ್ಞಾನಿಕ ರಂಗದಲ್ಲಿ ಸ್ತ್ರೀಯರಿಗೆ ಸಿಗಬೇಕಾದ ಅವಕಾಶಗಳನ್ನು ಕಸಿಯಲಾಗುತ್ತದೆ ಎಂದು ಇಡೀ ಜಗತ್ತಿಗೆ ತಿಳಿಯಿತು.

ಅನ್ನೆ ಮ್ಯಾಕ್ಲೆನ್ ಪ್ರಕರಣ ಮಾತ್ರವಲ್ಲ, ಯಾವುದೇ ಶಾಲೆ ಕಾಲೇಜಿನ ಮಕ್ಕಳನ್ನು ಅವರಿಗೆ ಗೊತ್ತಿರುವ ನಾಲ್ಕೈದು ವಿಜ್ಞಾನಿಗಳ ಹೆಸರು ಹೇಳಿ ಎಂದು ಕೇಳಿ ನೋಡಿ. ಬಹುತೇಕರು ನ್ಯೂಟನ್, ಡಾರ್ವಿನ್, ರಾಮನ್, ಐನ್‌ಸ್ಟೈನ್, ಎಡಿಸನ್‌ರ ಹೆಸರುಗಳನ್ನು ತಡಮಾಡದೆ ಹೇಳುತ್ತಾರೆ. ಅಪರೂಪಕ್ಕೆಂಬಂತೆ ಮೇಡಂ ಕ್ಯೂರಿಯ ಹೆಸರೂ ಕೇಳಿಬರುತ್ತದೆ. ಹೆಚ್ಚೆಂದರೆ ಕ್ಯೂರಿಯ ಮಗಳು ಐರೀನ್ ಬಗ್ಗೆಯೂ ಮಾತು ಬರಬಹುದು. ಅಲ್ಲಿಂದಾಚೆಗೆ ಮಕ್ಕಳ ಬಾಯಲ್ಲಿ ಯಾವ ಮಹಿಳಾ ವಿಜ್ಞಾನಿಯ ಹೆಸರೂ ಬರುವುದಿಲ್ಲ. ಅಷ್ಟರಮಟ್ಟಿಗೆ ನಮ್ಮ ಸಾಹಿತ್ಯ, ಇತಿಹಾಸ, ಕಥೆ, ಕಾವ್ಯ, ಲೇಖನ ಎಲ್ಲದರಲ್ಲೂ ಮಹಿಳೆಯರನ್ನು ಹೊರಗಿಟ್ಟಿದ್ದೇವೆ.



## ದೊಡ್ಡ ಸಾಧಕಿಯರಿವರು

‘ಡಾರ್ಕ್‌ಲೇಡಿ ಆಫ್ ಡಿಎನ್‌ಎ’ ಎಂದು ಖ್ಯಾತರಾದ ಬ್ರಿಟನ್ನಿನ ರೋಸಲಿಂಡ್ ಫ್ರಾಂಕ್ಲಿನ್, ‘ಚೀನಾದ ಮೇರಿ ಕ್ಯೂರಿ’ ಎಂದೇ ಖ್ಯಾತರಾದ ಭೌತ ತಜ್ಞೆ ಚಿಯೆನ್ ಶಿಂಗ್‌ವು, ನೊಬೆಲ್ ವಿಜೇತ ಮೊದಲ ಮಹಿಳೆ ಡೊರೋಥಿ ಹಾಡ್‌ಕಿನ್, ‘ಯೂರೋಪಿನ ಮೇರಿ ಕ್ಯೂರಿ’ ಎಂದು ಪ್ರಸಿದ್ಧರಾದ ಲೈಸ್ ಮಿಟ್ನರ್, ಅನೀಮಿಯಾಕ್ಕೆ ಮದ್ದು ಹುಡುಕಿದ ವೈದ್ಯೆ ಫ್ರೀಡಾ ರಾಬ್ಬಿನ್ಸ್, ನ್ಯೂಕ್ಲಿಯರ್ ಕವಚ ರಚಿಸಿ ನೊಬೆಲ್ ಪಡೆದ ಮಾರಿಯಾ ಜಾಪರ್ಟ್, ಅಮೆರಿಕಕ್ಕೆ ನೊಬೆಲ್ ಗಳಿಸಿಕೊಟ್ಟ ಮೊದಲ ಮಹಿಳೆ ಗೆರ್ಟಿಕೋರಿ, ಇಟಲಿಯ ಶತಾಯುಷಿ ವಿಜ್ಞಾನಿ ರೀಟಾ ಲೆವಿ ಮೊಂಟಾಲ್ಸಿನಿ, ಭಾರತದ ಮಿಸ್ಸೈಲ್ ವುಮನ್ ಟೆಸ್ಸಿ ಥಾಮಸ್, ಅಬೆಲ್ ಪ್ರಶಸ್ತಿ ಪಡೆದ ಮೊದಲ ಗಣಿತಜ್ಞ ಮಹಿಳೆ ಕರೆನ್ ಲೆಹನ್‌ಬೆಕ್ – ಇವರುಗಳ್ಯಾರೂ ನಮ್ಮ ಮಕ್ಕಳಿಗೆ ಗೊತ್ತಿಲ್ಲ. ಅವರಿಗೆ ಗೊತ್ತಿರುವುದು, ನೆನಪಿರುವುದು ಪುರುಷ ವಿಜ್ಞಾನಿಗಳು ಮಾತ್ರ. ಈ ಅರಿವಿಗೆ ಪತ್ರಿಕೆ, ದೃಶ್ಯ ಮಾಧ್ಯಮ, ಸಾಮಾಜಿಕ ಜಾಲತಾಣಗಳೂ ಹೊರತಲ್ಲ.

ಮಹಿಳಾ ವಿಜ್ಞಾನಿಗಳನ್ನು ಮಕ್ಕಳೇಕೆ ನೆನಪಿಸಿಕೊಳ್ಳುವುದಿಲ್ಲ? ಮಾಧ್ಯಮಗಳೇಕೆ ಕಡೆಗಣಿಸಿವೆ? ಈ ಪ್ರಶ್ನೆಗಳ ಜೊತೆಗೆ, ಎಷ್ಟೇ ಸಾಧನೆ ಮಾಡಿದರೂ ಅತ್ಯುನ್ನತ ಪ್ರಶಸ್ತಿಗಳನ್ನು ನೀಡುವಾಗ ಮಹಿಳೆಯರನ್ನೇಕೆ ಕಡೆಗಣಿಸಲಾಗುತ್ತದೆ ಎನ್ನುವ ಪ್ರಶ್ನೆಯೂ ನಮ್ಮನ್ನು ಕಾಡಬೇಕು. ನೊಬೆಲ್, ಅಬೆಲ್, ಫೀಲ್ಡ್ಸ್ ಮೆಡಲ್, ಯಾವುದೇ ಇರಲಿ, ಅಲ್ಲಿ ಪುರುಷರ ಹೆಸರುಗಳೇ ಹೆಚ್ಚು ರಾರಾಜಿಸುತ್ತವೆ. ಮಹಿಳೆಯರಿಗೇನಿದ್ದರೂ ನಂತರದ ಸ್ಥಾನ. ಈವರೆಗೆ ನೀಡಲಾಗಿರುವ 923 ನೊಬೆಲ್ ಬಹುಮಾನಗಳ ಪೈಕಿ ಮಹಿಳೆಯರ ಪಾಲು ಕೇವಲ 60. ಪುರುಷರಿಗೆ ಸಿಕ್ಕಿರುವುದು ಬರೋಬ್ಬರಿ 844. ಉಳಿದವು ಸಂಘ ಸಂಸ್ಥೆಗಳಿಗೆ ದೊರೆತಿವೆ. 2022ರ ವಿಜ್ಞಾನ ವಿಭಾಗದ ಆರು ನೊಬೆಲ್ ಬಹುಮಾನಗಳ ಪೈಕಿ ಐದು ಪುರುಷರ ಪಾಲಾಗಿವೆ. ಬಾಹ್ಯಾಕಾಶ ಚಟುವಟಿಕೆಯ ವಿಷಯದಲ್ಲೂ ಇದೇ ತಾರತಮ್ಯ ಪುನರಾವರ್ತನೆಯಾಗಿದೆ.

ಇದುವರೆಗೂ ಸುಮಾರು 560 ಗಗನಯಾತ್ರಿಗಳು ಅಂತರಿಕ್ಷಯಾನ ಕೈಗೊಂಡಿದ್ದಾರೆ. ಅದರಲ್ಲಿ ಮಹಿಳೆಯರ ಸಂಖ್ಯೆ ಕೇವಲ 71. ಇತ್ತೀಚೆಗೆ, 328 ದಿನಗಳ